# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 160/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಕಿರಣ್.ಕೆ.ವಿ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ವೆಂಕಟರಾಮು | **05.09.2024** | |
| ವಯಸ್ಸು | ಃ **41** ವರ್ಷ | | |
| ವೃತ್ತಿ | ಃ ಪಿ.ಸಿ, ದೇವರಾಜ ಪೋಲೀಸ್ ಠಾಣೆ | ಪ್ರಾ.ಸಾ. | ಃ **15** |
| ವಾಸಸ್ಥಳ | ಃ ಮೈಸೂರು | ಚಾ.ಸಾ. | ಃ **19** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ದಿಃ*07.01.2022* ರಿಂದ ಈ ತನಕ ದೇವರಾಜ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡುತ್ತಿದ್ದೇನೆ. ದಿಃ*13.01.2022* ರಂದು ಈ ಪ್ರಕರಣದ ತನಿಖಾಧಿಕಾರಿಯು ಮೃತ ಪ್ರಜ್ವಲ್ ಬಿದ್ದಿದ್ದ ಸ್ಥಳದ ಮಹಜರ್ ಮಾಡಲು ಅದ್ವೈತ ರೆಸಿಡೆನ್ಸಿ ಮುಂಭಾಗದ ರಸ್ತೆಗೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಅಲ್ಲಿಯೇ ಇದ್ದ ಕಮಲೇಶ್ ಮತ್ತು ವಿಕಾಸ್ ಎನ್ನುವವರನ್ನು ಪಂಚರಾಗಿ ಕರೆಸಿಕೊಂಡು ಆಂಧ್ರ ಶೈಲಿ ಶ್ರೀದೇವಿ ರೆಸ್ಟೋರೆಂಟ್ ಮುಂಭಾಗದಲ್ಲಿ ಮೃತನ ತಾಯಿ ತೋರಿಸಿದ್ದ ಜಾಗದಲ್ಲಿ ಮಹಜರ್ ಮಾಡಿದ್ದರು. ಆ ಸ್ಥಳದಲ್ಲಿ ರಕ್ತ ಬಿದ್ದ ಸ್ಥಳ ಇತ್ತು ವಾಹನಗಳು ಓಡಾಡಿದ್ದರಿಂದ ಅದು ಒಣಗಿತ್ತು. ಆ ಕಾಲಕ್ಕೆ ನಾನು ತನಿಖಾಧಿಕಾರಿ ಹೇಳಿದಂತೆ ಮಹಜರ್ ಅನ್ನು ಟೈಪ್ ಮಾಡಿದ್ದೆ. ಆ ದಿನ ರಾತ್ರಿ *9.30* ರಿಂದ *10.30* ರವರೆಗೆ ಬೀದಿ ದೀಪದ ಬೆಳಕಲ್ಲಿ ಮಹಜರ್ ಮಾಡಿದ್ದರು. ಅದನ್ನು ಟೈಪ್ ಮಾಡಿ ಪೆನ್ ಡ್ರೈವ್ ಗೆ ಹಾಕಿ ಠಾಣೆಗೆ ಹೋಗಿ ಪ್ರಿಂಟ್ ತೆಗೆದುಕೊಂಡು ಬಂದ ಬಳಿಕ ಪಂಚರಿಗೆ ಓದಿ ಹೇಳಿ ಸಹಿ

ಪಡೆದಿದ್ದೆವು. ಈಗ ನಾನು ನೋಡುತ್ತಿರುವ ನಿ.ಪಿ-*5* ನಾನು ಟೈಪ್ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*5*(ಡಿ) ಎಂದು ಗುರುತಿಸಿದೆ.

*2.* ದಿಃ*14.01.2022* ರಂದು ತನಿಖಾಧಿಕಾರಿಯಾದ ಲೀಲಾವತಿಯವರು ಶವ ಪಂಚನಾಮೆ ಮಾಡಲು ಮೈಸೂರಿನ ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ಕರೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಖಲೀಲ್, ಕಿರಣ್ ಮತ್ತು ಕಿರಣ್ ಎನ್ನುವ ವ್ಯಕ್ತಿಗಳನ್ನು ಪಂಚರಾಗಿ ಕರೆದು ಪ್ರಕರಣದ ವಿವರಗಳನ್ನು ತಿಳಿಸಿ ಮೃತ ಶವವನ್ನು ತೋರಿಸಿ ಶವ ಪಂಚನಾಮೆ ಮಾಡಿದ್ದರು. ಆ ಕಾಲಕ್ಕೆ ಮೃತನ ಎಡ ಮೊಣ ಕೈ ಹಿಂಭಾಗ ಮತ್ತು ಮಂಡಿ ಕೆಳಭಾಗ ಮುರಿದಿತ್ತು, ಮೂಗಿನಲ್ಲಿ ರಕ್ತ ಬಂದಿತ್ತು. ಬೆಳಗ್ಗೆ *9.30* ರಿಂದ *11.30* ರವರೆಗೆ ಆ ಮಹಜರ್ ಮಾಡಿದ್ದರು. ಆ ಕಾಲಕ್ಕೆ ನಾನು ತನಿಖಾಧಿಕಾರಿ ಹೇಳಿದಂತೆ ಮಹಜರ್ ಅನ್ನು ಟೈಪ್ ಮಾಡಿದ್ದೆ. ಅದನ್ನು ಟೈಪ್ ಮಾಡಿ ಪೆನ್ ಡ್ರೈವ್ ಗೆ ಹಾಕಿ ಠಾಣೆಗೆ ಹೋಗಿ ಪ್ರಿಂಟ್ ತೆಗೆದುಕೊಂಡು ಬಂದ ಬಳಿಕ ಪಂಚರಿಗೆ ಓದಿ ಹೇಳಿ ಸಹಿ ಪಡೆದಿದ್ದೆವು. ಈಗ ನಾನು ನೋಡುತ್ತಿರುವ ನಿ.ಪಿ-*7* ನಾನು ಟೈಪ್ ಮಾಡಿದ್ದ ಮಹಜರ್ ಇದೆ. ಆ ಕಾಲಕ್ಕೆ ಮೃತನ ತಂದೆ ಮಂಟೇಸ್ವಾಮಿ ಮತ್ತು ಇನ್ನೊಬ್ಬ ಪ್ರದೀಪ್ ಇವರ ಹೇಳಿಕೆ ಪಡೆದಿದ್ದರು. ನಂತರ ತನಿಖಾಧಿಕಾರಿ ಆದೇಶದಂತೆ ಮೃತ ಶವ ಪರೀಕ್ಷೆ ಮಾಡಿಸಿ ಶವವನ್ನು ಅವರ ತಂದೆಗೆ ಹಸ್ತಾಂತರಿಸಿದ್ದೆ.

*3.* ದಿಃ*17.01.2022* ರಂದು ತನಿಖಾಧಿಕಾರಿಯಾದ ರಾಜು ಇವರು ಮೃತ ಪ್ರಜ್ವಲ್ ಬಿದಿದ್ದ ಹೋಟೆಲ್ ಗೆ ಕರೆದುಕೊಂಡು ಹೋಗಿ ಆ ಹೋಟೆಲ್ ನಲ್ಲಿದ್ದ ಸಿಸಿ ಟಿವಿ ಫುಟೇಜ್ ಗಳನ್ನು ಸಂಗ್ರಹಿಸಿದ್ದರು. ಆ ಕಾಲಕ್ಕೆ ವ್ಯವಸ್ಥಾಪಕರಾದ ಕಶ್ಯಪ್ ಇವರು ದಿಃ*13.01.2022* ರ ಸಿಸಿ ಟಿವಿ ಫುಟೇಜ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿ ಪೆನ್ ಡ್ರೈವ್ ಗೆ ಹಾಕಿಕೊಂಡಿದ್ದೆವು. ಆ ದೃಶ್ಯಗಳಲ್ಲಿ ದಿಃ*13.01.2022* ರಂದು ಬೆಳಗ್ಗೆ *12.03* ಗಂಟೆಗೆ ಆರೋಪಿತರು ಆ ಸ್ಥಳಕ್ಕೆ ಬಂದು ಪ್ರಜ್ವಲ್ ನನ್ನು ಕರೆಸಿ ಅವನೊಂದಿಗೆ ಮಾತನಾಡಿ ಹೊಡೆದಿದ್ದ ದೃಶ್ಯ ದಾಖಲಾಗಿತ್ತು. ನಂತರ ಪ್ರಜ್ವಲ್ ಬಟ್ಟೆ ಬದಲಿಸಿಕೊಂಡು

ಬರುವುದಾಗಿ ಹೇಳಿ ಟೆರೆಸ್ ಮೇಲೆ ಹೋಗಿದ್ದ ದೃಶ್ಯ ಸಿಸಿ ಟಿವಿ ಯಲ್ಲಿದ್ದ ಕ್ಯಾಮಾರದಲ್ಲಿ ದಾಖಲಾಗಿತ್ತು. ಮದ್ಯಾಹ್ನ *12.24* ಕ್ಕೆ ಕ್ಯಾಮರಾ ಸಂಖ್ಯೆ *2* ರಲ್ಲಿ ಪ್ರಜ್ವಲ್ ನು ಬಿಲ್ಡಿಂಗ್ ಮೇಲಿಂದ ಕೆಳಗೆ ಬೀಳುವ ದೃಶ್ಯ ದಾಖಲಾಗಿತ್ತು. ಅದೇ ಕ್ಯಾಮಾರದಲ್ಲಿ ಮದ್ಯಾಹ್ನ *12.27* ಕ್ಕೆ ಪ್ರಜ್ವಲ್ ನನ್ನು ಆಟೋದಲ್ಲಿ ಕರೆದುಕೊಂಡು ಹೋಗುವ ದೃಶ್ಯ ದಾಖಲಾಗಿದೆ. ಆ ದೃಶ್ಯಗಳನ್ನು ಪೆನ್ ಡ್ರೈವ್ ಗೆ ಹಾಕಿಕೊಂಡು ಪೆನ್ ಡ್ರೈವ್ ನಿಂದ ನಮ್ಮ ಸಿಸ್ಟಮ್ ಗೆ ಹಾಕಿಕೊಂಡು ಪುನಃ ಅದನ್ನು ಸ್ಯಾನ್ ಡಿಸ್ಕ್ ಕಂಪನಿಯ ಪೆನ್ ಡ್ರೈವ್ ಗೆ ಹಾಕಿ ಅಮಾನತ್ತು ಪಡಿಸಿಕೊಳ್ಳಲಾಯಿತು. ಸಿಸಿ ಟಿವಿಯಲ್ಲಿ ದಾಖಲಾಗಿದ್ದ ಸಮಯ ನೈಜ ಸಮಯಕಿಂತ *1* ಗಂಟೆ *40* ನಿಮಿಷ ವ್ಯತ್ಯಾಸ ಇತ್ತು. ಆ ಮಹಜರ್ ಅನ್ನು ಮದ್ಯಾಹ್ನ *12* ರಿಂದ *1* ಗಂಟೆ ವರೆಗೆ ಮಾಡಲಾಗಿದೆ. ಈಗ ನಾನು ನೋಡುತ್ತಿರುವ ನಿ.ಪಿ-*14* ಆ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*14*(ಡಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ-*16* ಪೆನ್ ಡ್ರೈವ್ ನಲ್ಲಿ ದಾಖಲಾಗಿರುವ ದೃಶ್ಯಗಳು ಆ ದಿನ ಆ ಹೋಟೆಲ್ ನಲ್ಲಿ ಸಂಗ್ರಹಿಸಿದ್ದ ಸಿಸಿ ಟಿವಿ ದೃಶ್ಯಗಳು ಇವೆ. ( ಈ ವೇಳೆಗೆ ಸಾಕ್ಷಿದಾರರಿಗೆ ಪೆನ್ ಡ್ರೈವ್ ನಲ್ಲಿನ ದೃಶ್ಯಗಳನ್ನು ಠಾಣೆಯ ಲ್ಯಾಪ್ ಟಾಪ್ ನಲ್ಲಿ ಹಾಕಿ ತೋರಿಸಲಾಗಿದೆ)

**ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*